


ಜ್ಞಾನ ಪೂರ್ಣರಿಂದ ಸರ್ವ ಶಕ್ತಿ ಸಂಪನ್ನ
ಸಂಪೂರ್ಣ **ನಿರಾಕಾರಿ**ಗಳಾಗಿರಿ

ಸರ್ವರಿಗೂ ಸುಖ ನೀಡಲು ಸಂಪೂರ್ಣ
**ನಿರ್ವಿಕಾರಿ**ಗಳಾರಿ

ವಿಶ್ವ ಕಲ್ಯಾಣಕಾರಿಗಳಾಗಲು ಸಂಪೂರ್ಣ
**ನಿರಹಂಕಾರಿ**ಗಳಾಗಿರಿ



## 18 ನೇ ಜನವರಿ
## ಅವ್ಯಕ್ತ ಸ್ಮೃತಿ ದಿನ

# ಬ್ರಹ್ಮಾ ತಂದೆಯ
## 18 ಹೆಜ್ಜೆಗಳು

## 1ನೇ ಹೆಜ್ಜೆ

### ಸರ್ವರಿಗೂ ಅಲೌಕಿಕ ಪ್ರೀತಿ ಹಾಗೂ ಗೌರವ ನೀಡುತ್ತ ಮುಂದುವರಿಸುವುದು

★ ಬಾಬಾ ಸರ್ವರಿಗೂ ಸ್ವಾಭಾವಿಕ, ಸರ್ವ ಶ್ರೇಷ್ಠ, ಸಂಪೂರ್ಣ ಹಾಗೂ ಸತ್ಯವಾದ ಪ್ರೀತಿ ಮತ್ತು ಗೌರವ ನೀಡುತ್ತಿದ್ದರು.

★ ಬಾಬಾ ಅತಿ ಅಲೌಕಿಕ ಸ್ನೇಹದಿಂದ ಮಂದಹಾಸದಿಂದ ಮುದ್ದು ಮಕ್ಕಳೆ, ಆತ್ಮೀಯ ಮಕ್ಕಳೆಯೆಂದು ಹೇಳುತ್ತ ಸರ್ವರಿಗೂ ಅಭೂತ ಪೂರ್ವ ಶೀತಲತೆ ಹಾಗೂ ಉನ್ನತವಾದ ಸೌಭಾಗ್ಯದ ಅನುಭವ ಮಾಡಿಸುತ್ತಿದ್ದರು.

★ ಬಾಬಾ ಪ್ರತಿಯೊಂದು ಆತ್ಮದಲ್ಲಿ ಈಶ್ವರೀಯ ಸ್ನೇಹವನ್ನು ತುಂಬುತ್ತ ಅವರಲ್ಲಿರುವಂತಹ ಜನ್ಮ ಜನ್ಮಾಂತರಗಳಿಂದ ತುಂಬಿರುವ ಕಾಮ, ಕ್ರೋಧ, ಲೋಭ ಇತ್ಯಾದಿ ಸಂಸ್ಕಾರಗಳನ್ನು ಬಲಿಹಾರಿ ಮಾಡಿಸುತ್ತಿದ್ದರು ಹಾಗೂ ಈ ಅಂತಿಮ ಜನ್ಮದಲ್ಲಿ ತಮಗೆಲ್ಲರಿಗೂ ಸುಖ ಶಾಂತಿಯ ಸ್ವರ್ಗದ ಆಸ್ತಿಯನ್ನು ನೀಡಲು ಬಂದಿದ್ದೇನೆ ಎಂದು ಬಹಳ ಪ್ರೀತಿಯಿಂದ ಹೇಳುತ್ತಿದ್ದರು. ಬಾಪ್‌ದಾದಾರವರಿಂದ ಪ್ರತಿಯೊಂದು ಆತ್ಮರಿಗೂ ಇಂತಹ ಪ್ರೀತಿ ಹಾಗೂ ಪಾಲನೆ ಸಿಗುತ್ತಲೆ ಸಾಂಸಾರಿಕ ಸುಖವನ್ನು ಮರೆತು ಈಶ್ವರೀಯ ಪರಿವಾರದ ಸಂಬಂಧದಲ್ಲಿ ಬಂದು ಬಿಡುತ್ತಿದ್ದರು.

## 18ನೇ ಹೆಜ್ಜೆ

### ಬಾಬಾರವರು ಸರ್ವರ ಪ್ರತಿ ಆತ್ಮಿಕ ದೃಷ್ಟಿ ಇಡುತ್ತ ಸರ್ವರ ಶುಭಚಿಂತಕರಾಗಿದ್ದರು

★ ಕ್ಲಾಸಿನಲ್ಲಿ ಚಿಕ್ಕ ಮಕ್ಕಳು, ವೃದ್ಧರು, ದೊಡ್ಡ ವ್ಯಕ್ತಿಗಳು, ಗ್ರಾಮೀಣರು ಯಾರೇ ಇರಲಿ ಬ್ರಹ್ಮಾ ಬಾಬಾರವರು ಪ್ರತಿಯೊಬ್ಬರನ್ನು ಆತ್ಮರಾಗಿಯೇ ನೋಡುತ್ತಿದ್ದರು. ಎಂದಿಗೂ ಬಾಬಾರವರಿಗೆ ಮೇಲು-ಕೀಳನ, ಬಡವರು-ಶ್ರೀಮಂತರು ಎಂಬ ಭೇಧ-ಭಾವವಿರಲಿಲ್ಲ. ಎಲ್ಲರನ್ನು ಸಮಾನ ದೃಷ್ಟಿಯಿಂದ, ಸಮಾನ ಪ್ರೀತಿಯಿಂದ ಸತ್ಕಾರದಿಂದ ನೋಡುತ್ತಿದ್ದರು.

★ ಬಾಬಾ ಸದಾ ಸರ್ವರ ಪ್ರತಿ ಶುಭ ಹಾಗೂ ಮಂಗಳಕಾರಿ ವಿಚಾರಗಳನ್ನು ಮಾಡುತ್ತಿದ್ದರು ಹಾಗೂ ಇದೇ ಶಿಕ್ಷಣ ಅನ್ಯರಿಗೂ ತಿಳಿಸುತ್ತಿದ್ದರು. ಬಾಬಾ ಬಹಳ ವಿಶಾಲ ಹೃದಯದವರಾಗಿ ಮಾತೆಯರಿಗೆ, ಕನ್ಯೆಯರಿಗೆ ಹೇಳುತ್ತಿದ್ದರು ನಿಮ್ಮ ಲೌಕಿಕ ಸಂಬಂಧಿಕರು, ಅಪಕಾರಿ, ಅನಾಚಾರಿ, ಅತ್ಯಾಚಾರಿ, ಜ್ಞಾನದಲ್ಲಿ ವಿಘ್ನ ಹಾಕುವವರ ಕಲ್ಯಾಣ ಮಾಡುವ ಪುರುಷಾರ್ಥ ಮಾಡುತ್ತಿರಿ ಎಂದಿಗೂ ತಿರಸ್ಕಾರ ಮಾಡದಿರಿ. ನೀವೆಲ್ಲರು ಅವರ ಪ್ರತಿ ಸದಾ ಶುಭ ವಿಚಾರ ಮಾಡಿರಿ.

★ ಬಾಬಾ ಮಧ್ಯ ರಾತ್ರಿಯಲ್ಲಿಯೇ ನಿದ್ರೆಯನ್ನು ತ್ಯಾಗ ಮಾಡಿ ಜಾಗೃತರಾಗಿ ಸರ್ವ ಪ್ರಕಾರದ ಆತ್ಮರನ್ನು ಪಾವನ ಮಾಡಲು ಹಾಗೂ ಯೋಗಿಗಳನ್ನಾಗಿ ಮಾಡಲು, ಪ್ರಭುವಿನ ಸಂದೇಶ ನೀಡಲು ಯೋಜನೆಗಳನ್ನು ರಚಿಸುತ್ತಿದ್ದರು.

## 17ನೇ ಹೆಜ್ಜೆ

### ಬಾಬಾರವರ ಜೀವನದಲ್ಲಿ ಪ್ರತಿ ಮಾತಿನಲ್ಲಿ ಅದ್ಭುತವಾದ ಸಮತೂಲನೆಯಿತ್ತು

★ ಬಾಬಾರವರು ದೇಹಿ ಅಭಿಮಾನಿ ಆಗುವುದರಲ್ಲಿ ಸಂಪೂರ್ಣ ರೀತಿಯಲ್ಲಿ ಗಮನವಿಡುತ್ತಿದ್ದರು. ಜೊತೆ ಜೊತೆಗೆ ಶರೀರದ ಸ್ವಾಸ್ಥ್ಯದ ಸಂಬಾಲನೆಯನ್ನು ಸಹ ಬಹಳ ಚನ್ನಾಗಿ ಮಾಡುತ್ತಿದ್ದರು. ಬಾಬಾ ಹೇಳುತ್ತಿದ್ದರು ಪ್ರಕೃತಿ ತಮೋಪ್ರಧಾನವಾಗಿರುವ ಕಾರಣ ಹಾಗೂ ಅಜ್ಞಾನ ಕಾಲದಲ್ಲಿ ಮಾಡಿರುವ ವಿಕರ್ಮದ ಕಾರಣದಿಂದ ಶಾರೀರಿಕ ರೋಗ ಹಾಗೂ ವ್ಯಾಧಿಗಳು ಬಂದೇ ಬರುವುದು ಆದ್ದರಿಂದ ಈ ಮಾತುಗಳಲ್ಲಿ ಜಾಸ್ತಿ ಮನಸ್ಸನ್ನು ಇಡುವುದರಿಂದ ಶಿವಬಾಬಾರವರನ್ನು ನೆನಪು ಮಾಡಲಾರೆವು. ಮಕ್ಕಳಿಗೆ ತಿಳಿಸುತ್ತಿದ್ದರು ಔಷಧಿ ಮತ್ತು ತಂದೆಯ ನೆನಪಿನ ಆಶೀರ್ವಾದದಿಂದ ಈ ರೀತಿ ದೇಹಿ ಅಭಿಮಾನಿಯಾಗಿ ಪ್ರತಿ ಕಾರ್ಯವನ್ನು ಮಾಡಿರಿ.

★ ಬಾಬಾರವರು ಹೇಳುತ್ತಿದ್ದರು ಶರೀರ ಬಹಳ ಅಮೂಲ್ಯವಾಗಿದೆ. ಇದನ್ನು ಆರೋಗ್ಯವಾಗಿಟ್ಟುಕೊಳ್ಳಿರಿ ಇದರಿಂದ ಈಶ್ವರೀಯ ಸೇವೆಯನ್ನು ಮಾಡಿರಿ. ಒಳ್ಳೇಯ ಆಹಾರವನ್ನು ಸ್ವೀಕಾರ ಮಾಡಿರಿ ಆದರೆ ಹೊಟ್ಟೆಯ ಸಲುವಾಗಿ ಜಾಸ್ತಿ ಖರ್ಚು ಮಾಡ ಬೇಡಿರಿ. ಆಸಕ್ತಿಗಳಿಂದ ಮುಕ್ತರಾಗಿರಿ.

★ ಬಾಬಾ ಎಲ್ಲ ಮಕ್ಕಳಿಗೂ ಬಹಳ ಪ್ರೀತಿಯಿಂದ ಸಿಹಿ ತಿನ್ನಿಸುತ್ತಿದ್ದರು, ಪಿಕನಿಕ್ ಮಾಡಿಸುತ್ತಿದ್ದರು ಜೊತೆ ಜೊತೆಗೆ ಹೊರಗಿನ ಪ್ರಪಂಚದ ಆಕರ್ಷಣೆಗಳಿಂದಲೂ ಮನಸ್ಸನ್ನು ಸರಿಸುತ್ತಿದ್ದರು, ಹಾಗೂ ಮನಸ್ಸಿನ ಇಚ್ಛೆಗಳನ್ನೆಲ್ಲ ಶಾಂತಗೊಳಿಸುತ್ತಿದ್ದರು. ಬಾಬಾ ಅವಿಶ್ರಾಂತರಾಗಿ ಸೇವೆಯಲ್ಲಿ ತತ್ಪರರಾಗಿದ್ದರು ಸಹ ಸ್ವಯಂನ ಸ್ಥಿತಿಯ ಬಗ್ಗೆ ಬಹಳ ಗಮನವಿಡುತ್ತಿದ್ದರು. ಜೊತೆಗೆ ಆಲಸ್ಯದಿಂದ ಆಗುವ ನಷ್ಟದ ಬಗ್ಗೆಯೂ ಮಕ್ಕಳಿಗೆ ತಿಳಿಸುತ್ತಿದ್ದರು.

## 2ನೇ ಹೆಜ್ಜೆ

### ಪ್ರತಿಯೊಂದು ಈಶ್ವರೀಯ ಕಾರ್ಯದಲ್ಲಿ ನಡೆದರು ಹಾಗೂ ನಡೆಸಿದರು

★ ಬಾಬಾ ಮಕ್ಕಳಿಗೆ ಜ್ಞಾನಯುಕ್ತ ಜೀವನದ ನಿಯಮಗಳ ಬಗ್ಗೆ ತಿಳಿಸುತ್ತ ಹೇಳುತ್ತಿದ್ದರು ನಿಯಮಗಳನ್ನು ಆಚರಿಸುವುದರಲ್ಲಿಯೇ ಬಹಳ ಲಾಭವಿದೆ. ಸೃಷ್ಠಿಯು ನಿಯಮ ಪ್ರಮಾಣ ನಡೆಯುವುದು ಖಾಯಂ ಇದೆ ಆದ್ದರಿಂದ ಈಶ್ವರೀಯ ನಿಯಮಗಳನ್ನು ಎಂದಿಗೂ ಬಿಡಬಾರದಾಗಿದೆ.

★ ಬಾಬಾ ತಿಳಿಸುತ್ತಿದ್ದರು ಮಕ್ಕಳೇ – ಎಂದಿಗೂ ಸಹ ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳ ಬೇಡಿರಿ. ಒಂದು ವೇಳೆ ಯಾರಲ್ಲಿಯಾದರೂ ಅವಗುಣ ಕಂಡರೆ, ಸ್ವಭಾವ ಸಂಸ್ಕಾರಗಳ ಮಿಲನವಾಗುತ್ತಿಲ್ಲವೆಂದರೂ ಸಹ ಯಾರ ಮೇಲೆಯೂ ಕೈಯನ್ನು ಎತ್ತುವುದು, ದಂಡ ವಿದಿಸುವುದು ಮಾಡದಿರಿ. ಹಾಗೂ ಬೇರೆಯವರ ಅವಗುಣಗಳ ಬಗ್ಗೆ ಪರಸ್ಪರ ವರ್ಣನೆ ಮಾಡದೆ ವಾಯುಮಂಡಲವನ್ನು ಕೆಡಿಸದೆ ಒಬ್ಬ ಬ್ರಹ್ಮಾ ತಂದೆಯ ಮೂಲಕ ಶಿವ ತಂದೆಗೆ ತಿಳಿಸಿ ಬಿಡಿ, ಆಗ ಬಾಬಾ ಸ್ವಯಂ ಅವರನ್ನು ಸುಧಾರಿಸುವರು.

★ ಬಾಬಾ ತಿಳಿಸುತ್ತಿದ್ದರು ಮಕ್ಕಳೇ ನಿಮಿತ್ತ ಆತ್ಮರನ್ನು ವಿರೋಧ ಮಾಡದೆ ಅವರಿಗೆ ಸಂಪೂರ್ಣ ರೀತಿಯಲ್ಲಿ ಸಹಯೋಗ ನೀಡುವುದು ದೈವಿ ಮರ್ಯಾದೆ ಹಾಗೂ ಮಹಾನತೆಯಾಗಿದೆ.

## ಪ್ರತಿಯೊಬ್ಬರ ಗುಣವನ್ನು ನೋಡುತ್ತ ಅವರನ್ನು ಸೇವೆಯಲ್ಲಿ ತೊಡಗಿಸುತ್ತಿದ್ದರು

★ ಬಾಬಾ ಪ್ರತಿಯೊಂದು ಮಗುವಿನ ಗುಣಗಳ ವರ್ಣನೆ ಮಾಡುತ್ತ ಅವರಲ್ಲಿ ಉತ್ಸಾಹ ಹಾಗೂ ಖುಷಿಯನ್ನು ತುಂಬುತ್ತ ಅವರ ಗುಣಗಳನ್ನು ಸೇವೆಯಲ್ಲಿ ತೊಡಗಿಸುತ್ತ ಕಲ್ಯಾಣ ಮಾಡುತ್ತಿದ್ದರು. ಬಾಬಾ ಯಾವುದೇ ಮಗುವಿನ ಅವಗುಣವನ್ನು ನೋಡುತ್ತಿರಲಿಲ್ಲ.

★ ಬಾಬಾ ವಯಸ್ಸಾದವರಿಗೆ ಹೇಳುತ್ತಿದ್ದರು – ತಾವೆಲ್ಲರು ಬಹಳ ಸೇವೆ ಮಾಡಬಹುದಾಗಿದೆ ಏಕೆಂದರೆ ತಾವು ಬಹಳ ಅನುಭವಿಗಳಿದ್ದೀರಿ. ಈಶ್ವರೀಯ ಜ್ಞಾನವನ್ನು ತಮ್ಮ ಅನುಭವ ಸಹಿತ ಅನ್ಯರಿಗೆ ತಿಳಿಸುವುದರಿಂದ ಬಹಳ ಬೇಗನೆ ಅರ್ಥ ಮಾಡಿಕೊಳ್ಳುವರು. ಹಾಗೂ ಅವಿದ್ಯಾವಂತರಿಗೆ ಬಾಬಾ "ಅಲ್ಫ್ ಹಾಗೂ ಬೇ" ಇವೆರಡರ ಬಗ್ಗೆ ತಿಳಿಸಿಕೊಡುತ್ತಿದ್ದರು. ಈ ರೀತಿ ಬಾಬಾ ನಿರ್ಧನರನ್ನು, ಪ್ರತಿಯೊಂದು ವರ್ಗದವರು ಹಾಗೂ ಎಲ್ಲ ವಯಸ್ಸಿನವರನ್ನು ಆತ್ಮಿಕ ದೃಷ್ಟಿಯಿಂದ ನೋಡುತ್ತ ಲೋಕ ಕಲ್ಯಾಣಾರ್ಥವಾಗಿ ಯಜ್ಞದ ಒಂದಲ್ಲ ಒಂದು ಸೇವೆಯಲ್ಲಿ ಎಲ್ಲರನ್ನು ತೊಡಗಿಸಿದ್ದರಿಂದ ಪ್ರತಿಯೊಬ್ಬರಿಗೂ ತಮ್ಮ ಸಂಸ್ಕಾರಗಳನ್ನು ಪರಿವರ್ತನೆ ಮಾಡಿಕೊಳ್ಳಲು ಈಶ್ವರೀಯ ಬಲ ಪ್ರಾಪ್ತಿಯಾಯಿತು.



## ಬಾಬಾರವರಿಗೆ ಪ್ರತಿಯೊಂದು ಪರಿಸ್ಥಿತಿಯಲ್ಲಿ ಶಿವಬಾಬಾರವರ ನೆನಪಿರುತ್ತಿತ್ತು

★ ಬ್ರಹ್ಮಾ ಬಾಬಾರವರಿಗೆ ಶಿವಬಾಬಾರವರೊಂದಿಗೆ ಎಷ್ಟೊಂದು ಜ್ಞಾನಯುಕ್ತ ಪ್ರೀತಿ ಇತ್ತು ಅಂದರೆ ಅವರು ಪ್ರತಿ ಪರಿಸ್ಥಿತಿಯಲ್ಲಿ ನಿಮಿತ್ತರಾಗಿ ಬಾಬಾನ ನೆನಪಿನಲ್ಲಿರುತ್ತಿದ್ದರು. ಭಲೇ ಅವರ ಎದುರು ಏನೇ ಸಮಸ್ಯೆ ಬಂದಾಗ ಹೇಳುತ್ತಿದ್ದರು ಶಿವಬಾಬಾರವರನ್ನು ನೆನಪು ಮಾಡಿರಿ ಆಗ ಪುರುಷಾರ್ಥದಲ್ಲಿ ಪೂರ್ಣತೆ ಬರುವುದು. ಲೌಕಿಕ ಸ್ಥೂಲ ಪರಿಸ್ಥಿತಿಗಳಲ್ಲಿಯೂ ಸಹ ಶಿವಬಾಬಾರವರ ನೆನಪಿಗೆ ನಿಮಿತ್ತ ಮಾಡಿಕೊಂಡಿದ್ದರು.

★ ಬ್ರಹ್ಮಾ ಬಾಬಾರವರಿಗೆ "ಬಾಬಾ ಬಾಬಾ" ಮಧುರಬಾಬಾ ಎಂಬ ಒಬ್ಬ ಶಿವ ತಂದೆಯ ನೆನಪೇ ಮನಸ್ಸಿನಲ್ಲಿ ತುಂಬಿತ್ತು. ಹೇಗೆ ಸ್ನೇಹಿತರು ರಾತ್ರಿಯಾದರೆ ಅವರವರ ಮನೆಗೆ ತೆರಳಿ ಮತ್ತೆ ಬೆಳಗ್ಗಾಗುತ್ತಲೆ ಪರಸ್ಪರ ಸೇರಿ ಓದುವುದು, ಆಟವಾಡುವುದು ಮಾಡುವರು ಹಾಗೆಯೇ ಬಾಬಾರವರಿಗೆ ಶಿವಬಾಬಾರವರನ್ನು ಬಿಟ್ಟಿರಲು ಸಾಧ್ಯಾವಾಗುತ್ತಿರಲಿಲ್ಲ. ಆ ಸ್ನೇಹಿತರಾದರೋ ರಾತ್ರಿಯಾದರೆ ಜೊತೆಗಿರಲು ಸಾಧ್ಯವಿಲ್ಲ ಆದರೆ ಬ್ರಹ್ಮಾಬಾಬಾ ಶಿವಬಾಬಾರವರ ಜೊತೆಯಲ್ಲಿಯೇ ಮಲಗುತ್ತಿದ್ದರು. ಹೀಗೆ ಶಿವಬಾಬಾರವರ ನೆನಪು ಮತ್ತು ಪ್ರೀತಿಯ ಎಷ್ಟು ಆಳವಾದ ಸಂಬಂಧವಿದೆ.

## 15ನೇ ಹೆಜ್ಜೆ

### ಬಾಬಾರವರ ಜೀವನದಲ್ಲಿ ಜ್ಞಾನ ಹಾಗೂ ಪ್ರೇಮದ ಅದ್ಭುತವಾದ ಸಮತೋಲನೆಯಿತ್ತು

★ ಬಾಬಾರವರಲ್ಲಿ ಜ್ಞಾನವು ಅತಿ ಆಳವಾಗಿ ಇತ್ತು ಆದ್ದರಿಂದಲೇ ಅವರ ಜೀವನದಲ್ಲಿ ಅಪಾರವಾದ ಜ್ಞಾನದ ಹೊಳಪು ತುಂಬಿ ತುಳುಕುತ್ತಿತ್ತು. ಈ ಜ್ಞಾನವು ಅತ್ಯಮೂಲ್ಯ ಹಾಗೂ ಅವಿನಾಶಿಯಾಗಿದೆ ಎಂದು ಅವರು ಸದಾ ಹೇಳುತ್ತಿದ್ದರು. ಬಾಬಾ ಸರ್ವರಿಗೂ ಜ್ಞಾನವನ್ನು ಪ್ರೇಮ ಪೂರ್ಣರಾಗಿ ಹೇಳುತ್ತಿದ್ದರು.

★ ಬಾಬಾರವರ ಜೀವನದಲ್ಲಿ ಜ್ಞಾನ ಮತ್ತು ಅಲೌಕಿಕ ಪ್ರೇಮದ ಸಮತೋಲನೆ ತೀವ್ರವಾಗಿತ್ತು. ಜ್ಞಾನ ಮತ್ತು ಪ್ರೇಮ ಎರಡನ್ನು ಭಿನ್ನ ಮಾಡಲು ಸಾಧ್ಯವಿಲ್ಲ.

★ ಬಾಬಾರವರ ಸಂಪರ್ಕದಲ್ಲಿ ಯಾರೇ ಬರಲಿ ಪ್ರತಿಯೊಬ್ಬರು ಅವಶ್ಯವಾಗಿ ಪ್ರೇಮದ ಆಶ್ರಯದ ಅನುಭವ ಮಾಡುತ್ತಿದ್ದರು.

★ ಬಾಬಾ ಮಕ್ಕಳನ್ನು ಜ್ಞಾನದ ಆಳದಲ್ಲಿ ಕರೆದೊಯ್ಯಲು ಪ್ರಯತ್ನ ಮಾಡುತ್ತಿದ್ದರು. ಅವರ ಪ್ರೇಮ ತುಂಬಿದ ಜ್ಞಾನಯುಕ್ತ ಮಾತುಗಳೇ ಆತ್ಮರನ್ನು ಪವಿತ್ರರು ಹಾಗೂ ಯೋಗಿಗಳನ್ನಾಗಿ ಮಾಡುತ್ತಿತ್ತು.

## 4ನೇ ಹೆಜ್ಜೆ

### ಪ್ರತಿಯೊಂದು ಮಾತಿನಲ್ಲಿಯೂ ಸ್ವಯಂ ಶ್ರಮಪಟ್ಟು ತೋರಿಸುತ್ತಿದ್ದರು

★ ಬಾಬಾ ಈಶ್ವರೀಯ ಸೇವಾರ್ಥ ಹಾಗೂ ಲೋಕ ಕಲ್ಯಾಣಾರ್ಥ ತನು-ಮನ-ಧನವನ್ನು ಸಮರ್ಪಣೆ ಮಾಡಿದ ನಂತರ ತಮ್ಮ ಶರೀರ ವೃದ್ಧವಾಗಿದ್ದರೂ ಸಹ ನಿರಂತರ ಸೇವೆಯಲ್ಲಿ ತೊಡಗಿರುತ್ತಿದ್ದರು.

★ ಬಾಬಾರವರ ಪ್ರತಿಯೊಂದು ಸಂಕಲ್ಪವು ಸೇವಾರ್ಥ ಹಾಗೂ ಮನುಷ್ಯಾತ್ಮರಿಗೆ ಸುಖ ನೀಡುವ ಪ್ರತಿಯಾಗಿಯೇ ನಡೆಯುತ್ತಿತ್ತು. ಪ್ರತಿದಿನ 24 ಘಂಟೆಗೂ ಅಧಿಕವಾಗಿ ಸೇವೆಯಲ್ಲಿಯೇ ತೊಡಗಿರುತ್ತಿದ್ದರು. ತಿನ್ನುವುದು, ಕುಡಿಯುವುದು, ವಿಶ್ರಾಮದ ಬಗ್ಗೆಯು ಲೆಕ್ಕಿಸುತ್ತಿರಲಿಲ್ಲ.

★ ಬಾಬಾ ಹೇಳುತ್ತಿದ್ದರು ಮಕ್ಕಳೇ - ಈ ಶರೀರವನ್ನು ಯಜ್ಞ ಸೇವೆಯಲ್ಲಿ ದಧೀಚಿ ಋಷಿಯ ಸಮಾನ ಮೂಳೆಯನ್ನು ಸವಿಸುವುದರಿಂದ ಶರೀರ ನಿರೋಗಿ ಹಾಗೂ ಬಲಿಷ್ಠವಾಗುವುದು ಹಾಗೂ ಪಾವನವಾಗುವುದು. ಯಾರು ಎಷ್ಟು ಈ ಯಜ್ಞ ಸೇವೆಯನ್ನು ಮಾಡುವರು ಅವರಿಗೆ ಅಷ್ಟು ಬಲ ಸಿಗುವುದು ಹಾಗೂ ಆಯಸ್ಸು ಜಾಸ್ತಿಯಾಗುವುದು. ಬಾಬಾರವರು ನಮಗೆಲ್ಲರಿಗೂ ಈಶ್ವರೀಯ ಸೇವೆಯನ್ನು ಮಾಡಿ ಶ್ರೇಷ್ಠ ಭಾಗ್ಯವನ್ನು ಮಾಡಿಕೊಳ್ಳುವಂತಹ ಮಾರ್ಗವನ್ನು ತೋರಿಸಿದ್ದಾರೆ.

## 5ನೇ ಹೆಜ್ಜೆ

### ಪ್ರತಿಯೊಬ್ಬರನ್ನು ಖುಷಿ ಪಡಿಸುತ್ತ ಹಗುರತೆಯ ಅನುಭವ ಮಾಡಿಸುತ್ತಿದ್ದರು

★ ಬಾಬಾರವರು ಸದಾ ಸ್ವಯಂ ಖುಷಿಯಾಗಿದ್ದು ಸದಾ ಖುಷಿ ಆಗುವಂತಹ ಮಾತುಗಳನ್ನೇ ಅನ್ಯರಿಗೆ ಹೇಳುತ್ತಿದ್ದರು.

★ ಬಾಬಾರವರ ಮಧುರ ಮುಗುಳ್ನಗೆ ಭರಿತ ಚೆಹರೆಯನ್ನು ನೋಡುತ್ತಲೇ ಅಶಾಂತ ಉದಾಸಿ ಆತ್ಮಗಳು ಸಹ ತಮ್ಮ ಎಲ್ಲ ಚಿಂತೆಗಳನ್ನು ಮರೆತು ಖುಷಿಯಾಗಿ ಬಿಡುತ್ತಿದ್ದರು.

★ ಬಾಬಾರವರ ಸುತ್ತಲಿನ ವಾತಾವರಣವು ಸದಾ ಖುಷಿಯ ಅಲೆಗಳಿಂದ ತುಂಬಿರುತ್ತಿತ್ತು. ಬಾಬಾರವರು ಪ್ರತಿಯೊಂದು ಮಗುವನ್ನು ಅಪಾರ ಖುಷಿ ಹಾಗೂ ಉಲ್ಲಾಸದಲ್ಲಿ ತರುತ್ತ ಹೇಳುತ್ತಿದ್ದರು ಮಕ್ಕಳೇ – ಮಾಯಾ ರಾವಣನ ವಿಘ್ನಗಳಂತೂ ಬಹಳ ಬರುವುದು, ಬಿರುಗಾಳಿಯು ಸಹ ಬಹಳ ಬರುವುದು, ಆದರೂ ಸಹ ಎದುರ ಬೇಡಿರಿ ಹಾಗೂ ಎಂದಿಗೂ ಧೈರ್ಯವನ್ನು ಕಳೆದುಕೊಳ್ಳಬೇಡಿರಿ. ತಾವೆಲ್ಲರೂ ಕಲ್ಪ ಕಲ್ಪದ ವಿಜಯಿರತ್ನ ಆತ್ಮರಾಗಿದ್ದೀರಿ. ವಿಜಯದ ತಿಲಕವು ನಿಮ್ಮ ಹಣೆಯ ಮೇಲೆ ಇಡಲಾಗಿದೆ. ಆದ್ದರಿಂದ ಸದಾ ಧೈರ್ಯ ಶೀಲರಾಗಿ ಖುಷಿಯಾಗಿರಿ.

## 14ನೇ ಹೆಜ್ಜೆ

### ಬಾಬಾರವರಲ್ಲಿ ಸರ್ವ ಆತ್ಮರಲ್ಲಿ ಯೋಗ್ಯತೆಗಳನ್ನು ತುಂಬುವ ಕಲೆಯಿತ್ತು

★ ವರದಾನವನ್ನು ನೀಡಿ ಯೋಗ್ಯರನ್ನಾಗಿ ಮಾಡುವ ಹಾಗೂ ಈಶ್ವರೀಯ ಸೇವೆಯಲ್ಲಿ ಎಲ್ಲರನ್ನು ತೊಡಗಿಸುವುದು ಬ್ರಹ್ಮಾಬಾಬಾರವರ ವಿಶೇಷ ಕಲೆಯಾಗಿತ್ತು. ಕೆಲವರಿಗೆ ಭವನ ನಿರ್ಮಾಣದ ಕಲೆ, ಕೆಲವರಲ್ಲಿ ಯಜ್ಞದ ಲೆಕ್ಕಾಚಾರ ನೋಡಿಕೊಳ್ಳುವ ಹಾಗೂ ಬೇಗನೆ ನೋಟ್ ಮಾಡಿಕೊಳ್ಳುವ ವರದಾನ ನೀಡಿದರು. ಅವಿದ್ಯಾವಂತರನ್ನು ಸಹ ಅಧಿಕ ಕೌಶಲಶೀಲರು ಹಾಗೂ ಅನುಭವಿಯನ್ನಾಗಿ ಮಾಡಿದರು ಇದು ಬಾಬಾರವರ ಚಮತ್ಕಾರ ಆಗಿದೆ.

★ ಬಾಬಾರವರಿಂದ ವರದಾನವನ್ನು ಪಡೆದ ಯಜ್ಞ ವತ್ಸರೆಲ್ಲರೂ ಸಹ ಅಲೌಕಿಕ ರೂಪದಲ್ಲಿ ಎಷ್ಟೋಂದು ವಿಶಾಲ ಸೇವೆಯಲ್ಲಿ ತತ್ಪರರಾಗಿದ್ದಾರೆ. ಅವರ ಕಾರ್ಯ ಕುಶಲ ಕಲಾಕೃತ್ಯವನ್ನು ನೋಡುತ್ತ ಇಡಿ ವಿಶ್ವವೂ ಆಶ್ಚರ್ಯಚಕಿತರಾಗಿ ನೋಡುವರು ಏಕೆಂದರೆ ಯಾವುದೇ ಕಲಹ ಕ್ಲೇಶಗಳಿಲ್ಲದೆ ವಿಶಾಲವಾದ ಯಜ್ಞ ಸೇವೆ ನಡೆಯುತ್ತಿದೆ.

★ ಬಾಬಾರವರ ಸ್ಥಾಯಿ ಖುಷಿ, ಮಂದಹಾಸ ಮುಗುಳ್ನಗೆ, ಅವರ ನಯನಗಳಲ್ಲಿ ಶಿವಬಾಬಾರವರ ನೆನಪು ತುಂಬಿದ ಹೊಳಪು, ಮಹಾನತೆ, ವಿನಮ್ರತೆ, ಮಾಧುರ್ಯತೆ, ಆತ್ಮೀಯತೆ, ಪ್ರತಿಯೊಬ್ಬರೊಡನೆ ಮಿಲನಸಾರದ ಗುಣ, ವಿಕಟ ಪರಿಸ್ಥಿತಿಗಳಲ್ಲಿ ಧೈರ್ಯ ಹಾಗೂ ನಿಶ್ಚಿಂತತೆ, ಸಾತ್ವಿಕತೆ, ಅಟಲ ನಿಶ್ಚಯ, ಅಪಾರ ಪ್ರಭು ಪ್ರೀತಿ ಈ ರೀತಿ ಅವರದ್ದು ಬಹುಮುಖಿ ವ್ಯಕ್ತಿತ್ವ ಅದ್ವಿತೀಯವಾಗಿತ್ತು.

## 13ನೇ ಹೆಜ್ಜೆ

### ಸ್ನೇಹ, ಸಂರಕ್ಷಣೆ ಹಾಗೂ ಸಹಾಯ ಮಾಡುವುದರಲ್ಲಿ ನಿಪುಣರಾಗಿದ್ದರು

★ ಬಾಬಾರವರಲ್ಲಿ ಸರ್ವರ ಪ್ರತಿ ತಂದೆ ತನದ ಪ್ರೇಮವಿತ್ತು. ಹೇಗೆ ತಂದೆ ತನ್ನ ಮಕ್ಕಳ ಏಳಿಗೆಯನ್ನು ನೋಡಿ ಖುಷಿಯಾಗುವರು ಹಾಗೆಯೇ ಬಾಬಾನಿಗೂ ಸಹ ಹಾಗೇಯೆ ಮಕ್ಕಳನ್ನು ನೋಡಿ ಬಹಳ ಖುಷಿಯಾಗುತ್ತಿತ್ತು. ಹೇಗೆ ಯೋಗ್ಯ ತಂದೆಗೆ ಸದಾ ಇದೇ ಇಚ್ಛೆ ಇರುವುದು ತನ್ನ ಪ್ರತಿ ಮಗುವೂ ಸಹ ಸುಯೋಗ್ಯರಾಗಿರಲಿ ಹಾಗೂ ಸದಾ ಸುಖಿಯಾಗಿರಲಿ. ಹಾಗೆಯೇ ಬಾಬಾರವರಿಗೆ ಪ್ರತಿಯೊಂದು ಮಾನವಾತ್ಮರನ್ನು ನೋಡಿ ಅನಿಸುತ್ತಿತ್ತು.

★ ಬಾಬಾರವರು ಪವಿತ್ರ ಗೃಹಸ್ಥಿ ಮಕ್ಕಳನ್ನು ನೋಡಿ ಹೇಳುತ್ತಿದ್ದರು ಈ ಮಕ್ಕಳು ಸನ್ಯಾಸಿಗಳಗಿಂತಲೂ ಮುಂದೆ ಇದ್ದಾರೆ. ಹಾಗೂ ಯಾವುದೇ ಮಗು ಚನ್ನಾಗಿ ಈಶ್ವರೀಯ ಸೇವೆ ಮಾಡುತ್ತಿದ್ದರೆ ಅವರಿಗೆ ನೀವು ತಂದೆಯ ಹೃದಯಸಿಂಹಾಸನಧಾರಿ ಮಗು ಎಂದು ಹೇಳುತ್ತಿದ್ದರು. ಬಾಬಾನಿಗಿಂತಲೂ ಜಾಸ್ತಿ ಸೇವೆ ಮಾಡುವಿರಿ ಎಂದು ಪ್ರಶಂಶಿಸುತ್ತಿದ್ದರು.

★ ಬಾಬಾ ಯಜ್ಞ ವತ್ಸರಿಗೆ ಪತ್ರ ಬರೆಯುತ್ತಿದ್ದರು. ಪತ್ರದಲ್ಲಿ ಪ್ರತಿಯೊಬ್ಬರಿಗೂ ಹರ್ಷ, ಉಮ್ಮಂಗ, ಉತ್ಸಾಹ, ಉಲ್ಲಾಸ ಹೆಚ್ಚಿಸುವ ಹಾಗೂ ಮಾಯೆಯ ಕಷ್ಟಗಳಿಂದ ಸಂರಕ್ಷಿಸುವ ಮಾರ್ಗದರ್ಶನ ನೀಡುತ್ತಿದ್ದರು ಇದರಿಂದ ಯಜ್ಞ ವತ್ಸರ ಸ್ನೇಹ ಶಿವಬಾಬಾರವರೊಂದಿಗೆ ಅಧಿಕವಾಗುತ್ತಿತ್ತು.

## 6ನೇ ಹೆಜ್ಜೆ

### ಆಲಸ್ಯ ಹಾಗೂ ಹುಡುಗಾಟಿಕೆಯಿಂದ ಅತೀತರಾಗಿ ನಿದ್ರಾಜೀತರಾಗಿದ್ದರು

★ ಬಾಬಾ ಹೇಳುತ್ತಿದ್ದರು ಮಕ್ಕಳೇ ನಿದ್ರಾಜೀತರೇ ಸತ್ಯವಾದ ಯೋಗಿಗಳಾಗಿದ್ದಾರೆ. ಬಾಬಾರವರ ಜೀವನದಲ್ಲಿ ಆಲಸ್ಯದ ಹೆಸರು ಗುರುತು ಸಹ ಇರಲಿಲ್ಲ. ವೃದ್ಧ ಶರೀರವಾಗಿದ್ದರೂ ಸಹ ಬಾಬಾ ಹಗಲು-ರಾತ್ರಿ ಮನುಷ್ಯಾತ್ಮರ ಸಂಸ್ಕಾರಗಳನ್ನು ಪರಿವರ್ತನೆ ಮಾಡುವ ಮಹಾನ್ ಕಾರ್ಯದಲ್ಲಿ ತೊಡಗಿರುತ್ತಿದ್ದರು.

★ ಬಾಬಾರವರ ಜೀವನದಲ್ಲಿ ಎಂದಿಗೂ ಸಹ ಸುಸ್ತಿನ ಚಿನ್ಹೆ ಕಂಡು ಬಂದಿಲ್ಲ. ಎಂದಿಗೂ ಸಹ ಅವರು ಆಲಸ್ಯದಿಂದ ಯಾವುದೇ ಕಾರ್ಯವನ್ನು ಸ್ಥಗಿತಗೊಳಿಸಲಿಲ್ಲ. ಏನೇ ಕೆಲಸ ಎದುರಿಗೆ ಇದ್ದರೂ ಸಹ ಪೂರ್ಣ ಮನಸ್ಸಿನಿಂದ, ಬಹಳ ಎಚ್ಚರಿಕೆಯಿಂದ, ಉತ್ಸಾಹದಿಂದ ಮಾಡುತ್ತಿದ್ದರು.

★ ಬಾಬಾರವರ ಎದುರು ಎಷ್ಟೆ ವಿಘ್ನಗಳು ಬಂದರೂ ಸಹ ಕೆಲಸದ ಪ್ರಾರಂಭದಲ್ಲಿ ಅಸಂಭವವೆಂದು ಅನಿಸಿದರೂ ಸಹ ಎಲ್ಲ ಪರಿಸ್ಥಿತಿಗಳು ಪ್ರತಿಕೂಲವಾಗಿದ್ದರೂ ಸಹ ಆ ಕಾರ್ಯವನ್ನು ಸಂಪನ್ನ ಮಾಡಲೇಬೇಕೆಂದು ಯಾವುದಾದರೂ ಯುಕ್ತಿಯನ್ನು ಹುಡುಕುತ್ತಿದ್ದರು. ಇದು ಅವರ ಶಕ್ತಿಶಾಲಿ ಮನೋಬಲ, ದೃಢತೆ ಹಾಗೂ ಪ್ರತಿಜ್ಞೆಯ ಪ್ರತೀಕವಾಗಿದೆ.

## 7ನೇ ಹೆಜ್ಜೆ

### ನನ್ನತನದ ಬಾನವನ್ನು ಸಂಪೂರ್ಣ ತ್ಯಾಗ ಮಾಡಿದರು

★ ಬಾಬಾರವರು ನನ್ನತನವನ್ನು ಸಂಪೂರ್ಣವಾಗಿ ತ್ಯಾಗ ಮಾಡಿ ನಂಬರ್‌ವನ್ ಪದವಿಯನ್ನು ಪ್ರಾಪ್ತಿ ಮಾಡಿಕೊಂಡರು. ಬಾಬಾರವರಿಗೆ ಅವರು ಮಾಡಿದ ತ್ಯಾಗದ ಪ್ರತಿ ಸ್ವಲ್ಪವೂ ಅಭಿಮಾನವಿರಲಿಲ್ಲ. ಬಾಬಾ ಸದಾ ಹೇಳುತ್ತಿದ್ದರು ನಾನು ಕವಡೆಯನ್ನು ಕೊಟ್ಟು ಸ್ವರ್ಗದ ರಾಜ್ಯಭಾಗ್ಯವನ್ನು ಪಡೆದಿದ್ದೇನೆ.

★ ಬಾಬಾರವರು ಬಹಳ ಸರಳ ಸ್ವರೂಪದವರಾಗಿದ್ದರು. ಅವರನ್ನು ಯಾರೇ ನೋಡಿದರೂ ಸಹ ಇವರು ಪ್ರಜಾಪಿತ ಬ್ರಹ್ಮಾ ಎಂದು ಗುರುತಿಸುತ್ತಿರಲಿಲ್ಲ, ಆದರೆ ಅವರ ಶಾಲೀನತೆ ಹಾಗೂ ಮಹಾನತೆಯ ಕಾರಣ ಪ್ರತ್ಯಕ್ಷವಾಗಿ ವಿಶ್ವ ಮಹಾರಾಜನಂತೆ ಕಂಡು ಬರುತ್ತಿದ್ದರು. ಮಾನ–ಗೌರವದ ಇಚ್ಛೆಯಿಂದ ಸಂಪೂರ್ಣ ಮುಕ್ತರಾಗಿದ್ದರು.

★ ಬಾಬಾರವರು ತಮ್ಮ ಹತ್ತಿರ ಏನನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಭಲೆ ಮಕ್ಕಳು ಹೇಳುತ್ತಿದ್ದರು ಹಳೆಯ ಗುಡಿಸಿಲಿನ ಬದಲು ಹೊಸ ಮನೆಯಲ್ಲಿ ವಾಸ ಮಾಡಿರಿ ಎಂದು ಆದರೆ ಬಾಬಾ ಹೇಳುತ್ತಿದ್ದರು ಶಿವಬಾಬಾ ಈ ಹಳೆಯ ಶರೀರದಲ್ಲಿ, ಹಳೆಯ ಪ್ರಪಂಚದಲ್ಲಿಯೇ ಬಂದಿದ್ದಾರೆ. ಆದ್ದರಿಂದ ಬಾಬಾ ಹಳೆಯ ಮನೆಯಲ್ಲಿಯೇ ಇರುವರು. ಹೊಸ ಮನೆ ಮಕ್ಕಳಿಗಾಗಿ ಇದೆ. ಇಂತಹ ತ್ಯಾಗದ ಮುಂದೆ ಬೇರೆ ಯಾವುದೇ ತ್ಯಾಗವಿಲ್ಲ. ನನ್ನತನದ ಸಂಪೂರ್ಣ ತ್ಯಾಗದಿಂದಲೇ ಬಾಬಾ ಸದಾ ನಿಶ್ಚಿಂತ ಹಾಗೂ ಅಡೋಲರಾಗಿದ್ದರು.

## 12ನೇ ಹೆಜ್ಜೆ

### ಬಾಬಾರವರು ಬಹಳ ಸರಳ ಮತ್ತು ಸದ್ವ್ಯವಹಾರದವರಾಗಿದ್ದರು

★ ಬಾಬಾರವರು ಸರಳತೆಗೆ ಉತ್ತಮ ಉದಾಹರಣೆ ಆಗಿದ್ದರು. ಅವರು ಚಿಕ್ಕ ಹಳೆಯದಾದ ಗುಡುಸಿಲಿನಲ್ಲಿ ಇದ್ದರು. ಅದೇ ಗುಡುಸಿಲೇ ವಿಶ್ರಮಿಸುವ, ಭೋಜನ ಗೃಹ, ಕಾರ್ಯಾಲಯ, ಮಕ್ಕಳನ್ನು ಮಿಲನ ಮಾಡುವ ಸ್ಥಳವಾಗಿತ್ತು. ಆ ಹಳೆಯ ಗುಡುಸಿಲಿನಲ್ಲಿಯೇ ಸೇವಾ ಮೂರ್ತಿ ಬಾಬಾ ಅನೇಕ ಆತ್ಮರಿಗೆ ಹೊಸ ಜೀವನವನ್ನು ಪ್ರಧಾನಿಸಿದರು. ಹಾಗೂ ಅನೇಕ ಆತ್ಮರು ಅದೇ ಗುಡಿಸಿಲಿನಲ್ಲಿಯೇ ಪ್ರಭು ಮಿಲನದ ಸುಖವನ್ನು ಪಡೆಯುತ್ತ ಈಶ್ವರನಿಗೆ ಅರ್ಪಣೆಯಾಗುವ ಸಂಕಲ್ಪ ಮಾಡುತ್ತಿದ್ದರು.

★ ಬಾಬಾ ಹೇಳುತ್ತಿದ್ದರು ಈಶ್ವರೀಯ ಸೇವೆಯಲ್ಲಿ ಯಾರೇ ಒಂದು ಪೈಸೆಯಷ್ಟು ಅರ್ಪಣೆ ಮಾಡಿದರು ಅವರಿಗೆ ಅದು ಲಕ್ಷ ರೂಪಾಯಿಯಷ್ಟು ಮೂಲ್ಯವಾಗಿದೆ. ಆ ಧನ ಮನುಷ್ಯಾತ್ಮರನ್ನು ಪಾವನ ಮಾಡಲು ಹಾಗೂ ಅವರಿಗೆ ಶಾಂತಿಯನ್ನು ನೀಡುವ ಸಲುವಾಗಿ ಇದೆ. ನಾವು ನಮ್ಮ ಸುಖಕ್ಕೋಸ್ಕರ ಅದನ್ನು ಬಳಸಬಾರದಾಗಿದೆ. ಬಳಸಿದರೆ ವಿಶ್ವಾಸದ ಉಲ್ಲಂಘನೆಯಾಗುತ್ತದೆ.

★ ಬಾಬಾ ಪ್ರತಿಯೊಬ್ಬರ ಜೊತೆಯಲ್ಲಿಯೂ ಸಹ ಬಹಳ ಸುಕೋಮಲವಾಗಿ, ಸುಮಧುರವಾಗಿ, ಸದ್ಭಾವನ ಪೂರ್ಣ, ಸಮ್ಮಾನ ಸಹಿತ ಶಬ್ದಗಳಿಂದ ವಾರ್ತಾಲಾಪ ಮಾಡುತ್ತಿದ್ದರು.

## ಬಾಬಾ ಸಾಗರದ ಸಮಾನ ಗಂಭೀರವಾಗಿದ್ದರು

★ ಕರಾಚಿಯಲ್ಲಿ ಬಾಬಾನ ಜೊತೆ ಎಲ್ಲ ಮಕ್ಕಳು ಸಹ ಸಾಗರದ ಬಳಿಗೆ ಹೋಗಿ ಕುಳಿತುಕೊಳ್ಳುತ್ತಿದ್ದರು ಆಗ ಬಾಬಾ ಮಕ್ಕಳಿಗೆ ಸಾಗರದ ಅಲೆಗಳ ಬಗ್ಗೆ ತಿಳಿಸುತ್ತಿದ್ದರು – ಹೇಗೆ ಸಾಗರದ ಅಲೆಗಳು ನಿಮ್ಮ ಬಳಿಯಲ್ಲಿ ಬಂದು ಮತ್ತೆ ವಾಪಿಸ್ಸು ಹೋಗುತ್ತದೆ ಹಾಗೆಯೇ ನೀವೆಲ್ಲರು ಜ್ಞಾನ ಸಾಗರ ಪರಮಪಿತ ಪರಮಾತ್ಮನ ಮಕ್ಕಳಾಗಿದ್ದೀರಿ, ಈ ಸಾಗರದಿಂದ ಗುಣಗಳ ಗ್ರಹಣ ಮಾಡಿರಿ ಆಗ ನಿಮ್ಮ ಮನಸ್ಸಿನಲ್ಲಿ ಎಂದಾದರೂ ಮಾಯೆಯ ಅಲೆಗಳು ಬಂದರೆ ಅದನ್ನು ವಾಪಿಸ್ಸು ಕಳಿಸಿಬಿಡಿರಿ.

★ ಬಾಬಾ ಹೇಳುತ್ತಿದ್ದರು ನೋಡಿ ಮಕ್ಕಳೇ ಜನರು ಸಾಗರದಲ್ಲಿ ಕಸ–ಕಡ್ಡಿ ಅಥವಾ ವಿಷ ವಸ್ತುಗಳನ್ನು ಹಾಕುತ್ತಾರೆ ಅದು ಸಾಗರದ ಆಳಕ್ಕೆ ಇಳಿಯವುದಿಲ್ಲ ಆದರೆ ಅದೆಲ್ಲವು ಸಹ ಅಲೆಗಳ ಜೊತೆ ಹೊರಗೆ ಬಂದು ದಡಕ್ಕೆ ಸೇರುತ್ತದೆ. ಅದೇ ರೀತಿಯಲ್ಲಿ ಈ ಸಾಗರದ ಸಮಾನ ನಿಮ್ಮೆಲ್ಲರ ಸ್ವಭಾವ ಆಗಬೇಕಿದೆ. ನೀವು ಮಕ್ಕಳ ಮನದಲ್ಲಿ ಯಾವುದೇ ಪ್ರಕಾರದ ಕೊಳಕು ಇರಬಾರದಾಗಿದೆ. ಹೇಗೆ ಸಾಗರದ ಆಳಕ್ಕೆ ಧುಮುಕಿದರೆ ಅಲ್ಲಿಂದ ವಜ್ರ, ಮುತ್ತು, ಹವಳ, ರತ್ನಗಳನ್ನು ತರುತ್ತಾರೆ, ಹಾಗೆಯೇ ನೀವು ಮಕ್ಕಳು ವಿಚಾರ ಸಾಗರ ಮಂಥನವನ್ನು ಮಾಡಿ ಜ್ಞಾನದ ಆಳದಲ್ಲಿ ಹೋದರೆ ಅತ್ಯಮೂಲ್ಯವಾದ ರತ್ನ, ವಜ್ರ ಲಭಿಸುತ್ತದೆ.

★ ಬಾಬಾ ಸಾಗರದ ದಡದಲ್ಲಿ ಇರುವ ಸಾಲಿಗ್ರಾಮಗಳನ್ನು ತೋರಿಸುತ್ತ ಹೇಳುತ್ತಿದ್ದರು ಇದು ಸಾಗರದ ಅಲೆಗಳು ಮತ್ತು ಚಿಕ್ಕ ಇರುವೆಗಳಿಂದ ಪೂಜ್ಯನೀಯ ಸಾಲಿಗ್ರಾಮಗಳ ರಚನೆಯಾಗಿದೆ ಹಾಗೆಯೇ ನೀವು ಮಕ್ಕಳು ಸಹ ಅನೇಕ ಪ್ರಕಾರದ ಕಷ್ಟಗಳನ್ನು ಸಹನೆ ಮಾಡುತ್ತ ಜ್ಞಾನ ಸಾಗರದ ಅಲೆಗಳಲ್ಲಿ ಈಜುತ್ತಿರಿ ಆಗ ಒಂದು ದಿನ ನೀವು ಸಹ ಸ್ವಚ್ಛ ಹಾಗೂ ಪಾವನರಾಗಿ ಬಿಡುವಿರಿ.



## ಬ್ರಹ್ಮಾಬಾಬಾ ಸರ್ವಶ್ರೇಷ್ಠ ಯೋಗಿಯಾಗಿದ್ದರು

★ ಬಾಬಾ ಎಲ್ಲರೊಡನೆ ಮಾತನಾಡುತ್ತಲೇ ಮಧ್ಯ ಮಧ್ಯದಲ್ಲಿ ಶರೀರದ ಭಾನದಿಂದ ದೂರವಾಗಿ ಬಿಡುತ್ತಿದ್ದರು ಅಂದರೆ ಅಶರೀರಿಯಾಗಿ ಬಿಡುತ್ತಿದ್ದರು ಎಲ್ಲವನ್ನು ಕೇಳಿಸಿಕೊಳ್ಳುತ್ತದ್ದರೂ ನಿರ್ಲಿಪ್ತ ಅವಸ್ಥೆಯಲ್ಲಿ ಇರುತ್ತಿದ್ದರು.

★ ಬಾಬಾ ಸದಾ ಸಾರ ರೂಪದಲ್ಲಿ ಬೇಹದ್ದಿನ ಮಹಾಯಜ್ಞದ ಸೇವೆಯ ಸಮಾಚಾರವನ್ನು ಕೇಳುತ್ತ ಸಾರ ರುಪದಲ್ಲಿಯೇ ಉತ್ತರವನ್ನು ನೀಡುತ್ತಿದ್ದರು. ಶಬ್ದದಲ್ಲಿ ಬಂದರೂ ಸಹ ಒಂದು ಸೆಕೆಂಡಿನಲ್ಲಿ ಶಬ್ದದಿಂದ ಭಿನ್ನರಾಗುತ್ತ ತಮ್ಮ ಎರಡು ಮಹಾವಾಕ್ಯದಿಂದ ಅನ್ಯರಿಗೂ ಸಹ ಶಬ್ದದಿಂದ ಭಿನ್ನರಾಗುವ ಅನುಭವ ಮಾಡಿಸುತ್ತಿದ್ದರು.

★ ಬಾಬಾರವರ ಪ್ರತಿಯೊಂದು ಕರ್ಮವು ಯೋಗಯುಕ್ತವಾಗಿ ಇರುತ್ತಿತ್ತು. ಅವರು ಯೋಗವನ್ನು ಮನೋರಂಜನೆಯ ಸಾಧನೆಯನ್ನಾಗಿ ಮಾಡಿಕೊಂಡಿದ್ದರು. ಬಾಬಾ ಓದುತ್ತ, ಬರಿಯುತ್ತ, ಕೇಳಿಸಿಕೊಳ್ಳುತ್ತ, ಮಕ್ಕಳೊಂದಿಗೆ ಮಿಲನ ಮಾಡುತ್ತ ಸದಾ ಶಿವಬಾಬಾರವರ ಜೊತೆ ಇರುತ್ತಿದ್ದರು ಹಾಗೂ ಸದಾ ಶಿವಬಾಬಾರವರೊಂದಿಗೆ ಮಾತನಾಡುತ್ತಿದ್ದರು. ಯಾರ ಮೇಲೆ ಬಾಬಾರವರ ದೃಷ್ಟಿ ಬೀಳುತ್ತಿತ್ತು ಅವರು ಅಶರೀರಿಯಾಗುತ್ತಿದ್ದರು ಹಾಗೂ ಸ್ವತಃವಾಗಿ ಎಲ್ಲರ ಸಮಸ್ಯೆಗೆ ಸಮಾಧಾನ ಸಿಕ್ಕಿ ಬಿಡುತ್ತಿತ್ತು.

# 9ನೇ ಹೆಜ್ಜೆ

## ಬಾಬಾ ಸದಾ ನಿಶ್ಚಿಂತ ಹಾಗೂ ಅಚಲ ಸ್ಥಿತಿಯುವರಾಗಿದ್ದರು

1956ರಲ್ಲಿ ಬಾಬಾರವರಿಗೆ ಅನಾಯಾಸವಾಗಿ ಒಂದು ಶಾರೀರಿಕ ವ್ಯಾಧಿ ಉಂಟಾಯಿತು ಆಗ ಅಬೂವಿನ ವೈದ್ಯರು ಮುಂಬೈಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಲು ಬಹಳ ಗಂಭೀರ ಮುಖ ಮುದ್ರೆಯಿಂದ ಚಿಂತೆ ಮಾಡುತ್ತ ಹೇಳಿದರು ಈ ವಯಸ್ಸಿನಲ್ಲಿ ಶಸ್ತ್ರ ಚಿಕಿತ್ಸೆ ಮಾಡುವುದು ಕೆಲವೇ ವಿರಳ ಜನರಲ್ಲಿ ಸಫಲವಾಗಿದೆ. ಇದನ್ನು ಕೇಳಿದ ಯಜ್ಞ ವತ್ಸರಿಗೆ ಮನಸ್ಸು ತುಂಬಿ ಬಂದಿತು. ಆದರೆ ಬಾಬಾರವರ ಚೆಹೆರೆ ಮುಗುಳ್ನಗೆ ಯಿಂದ ತುಂಬಿ ಹೊಳೆಯುತ್ತಿತ್ತು, ಚೆಹೆರೆಯಲ್ಲಿ ಯಾವುದೇ ಪ್ರಕಾರದ ಕಷ್ಟದ ಚಿಹ್ನೆಯೂ ಕಾಣಿಸುತ್ತಿರಲಿಲ್ಲ. ಬಾಬಾ ತಮ್ಮ ನಿಶ್ಚಿಂತ ಹಾಗೂ ಅಚಲ ಸ್ಥಿತಿಯಲ್ಲಿ ಸ್ಥಿತರಾಗಿದ್ದರು. ಮಕ್ಕಳಿಗೆ ಹೇಳುತ್ತಿದ್ದರು ತಾವೆಲ್ಲರೂ ತಿಳಿದ್ದಿದ್ದೀರಿ ಇದು ಹಳೆಯ ಶರೀರವಾಗಿದೆ ಇದಕ್ಕಂತೂ ತೇಪೆ ಹಾಕುತ್ತ ನಡೆಸ ಬೇಕಾಗುತ್ತೆ. ನನಗೆ ಏನು ಆಗಿಲ್ಲ ನಾನೂ ಚೆನ್ನಾಗಿದ್ದೀನಿ. ಮಕ್ಕಳೇ ಚಿಂತಿಸ ಬೇಡಿರಿ ಧೈರ್ಯವಾಗಿ ಇರಿ. ಬಾಬಾರವರ ಈ ಸ್ಥಿತಿ ಸೂಕ್ಷ್ಮ ರೂಪದಲ್ಲಿ ಎಲ್ಲ ಯಜ್ಞ ವತ್ಸರಿಗೆ ಈ ರೀತಿ ಶ್ರೇಷ್ಠ ಪ್ರೇರಣೆ ನೀಡುತ್ತಿತ್ತು - ಮಾಯೆಯ ಅತಿರಿಕ್ತ ಕಾಯ (ಶರೀರ)ಕ್ಕೆ ಒಂದುವೇಳೆ ಕಠಿಣಾತಿ ಕಠೀಣ ಪರೀಕ್ಷೆ ಬಂದರೂ ಸಹ ದೇಹದಿಂದ ಭಿನ್ನರಾಗಿ ಆತ್ಮಿಕ ಸ್ಥಿತಿಯಲ್ಲಿ ಇರುವ ಹಾಗೂ ಪರಮಾತ್ಮನ ಸ್ಮೃತಿಯಲ್ಲಿ ಸ್ಥಿತರಾಗಿರುವ ಅಭ್ಯಾಸವು ಈ ರೀತಿ ಪರಿಪಕ್ವ ಆಗಬೇಕಿದೆ ಇದರಿಂದ ಸ್ವಲ್ಪವೂ ನಮ್ಮ ಸ್ಥಿತಿ ಅಲಗಾಡಬಾರದಾಗಿದೆ.

# 10ನೇ ಹೆಜ್ಜೆ

## ಬಾಬಾ ಸದಾ ಬೇಹದ್ದಿನ ಅಪಾರ ಖುಷಿಯಲ್ಲಿ ಇರುತ್ತಿದ್ದರು

★ ಬಾಬಾ ಹೇಳುತ್ತಿದ್ದರು ಎಲ್ಲರ ಮನೆಯಲ್ಲಿಯೂ ಸಹ ಮದುವೆಯ ಸಮಯದಲ್ಲಿ ಡೋಲು, ನಗಾಡೆಯನ್ನು ಬಾರಿಸುತ್ತಾರೆ ಹಾಗೆಯೇ ಇಲ್ಲಿಯೂ ಸಹ 24 ಘಂಟೆಯು ಖುಷಿಯ ನಗಾಡೆಯನ್ನು ಬಾರಿಸ ಬೇಕಿದೆ ಏಕೆಂದರೆ ಇಲ್ಲಿ ಆತ್ಮಗಳ ಜೊತೆ ಪರಮಾತ್ಮ ಶಿವನ ನಿಶ್ಚಿತಾರ್ಥ ಹಾಗೂ ಮದುವೆಯಾಗುತ್ತಿದೆ, ಇದಕ್ಕಿಂತಲೂ ಹೆಚ್ಚಾದ ಖುಷಿ ಮತ್ತೊಂದಿರಲು ಸಾಧ್ಯವಿಲ್ಲ. ಹೀಗೆ ಬಾಬಾರವರು ಖುಷಿ ಹಾಗೂ ಉತ್ಸಾಹದ ಸಾಕಾರ ಶಕ್ತಿಯ ಮನೆ ಆಗಿದ್ದರು.

★ ಬಾಬಾರವರಿಗೆ ಶಿವಬಾಬಾರವರ ಅವತರಣೆಯ ಹಾಗೂ ಮಿಲನದ ಅಪಾರ ಖುಷಿಯಿತ್ತು ಇದರಿಂದ ಅವರ ಮನ-ವಚನ ಹಾಗೂ ಕರ್ಮದಲ್ಲಿ ಖುಷಿಯ ಇಷ್ಟು ಪ್ರಭಾವವಿತ್ತು ಅಂದರೆ ಎಷ್ಟೆ ಅಶಾಂತಿಯುಳ್ಳ ಆತ್ಮಗಳು ಸಹ ಅವರ ಸಾನಿಧ್ಯದಲ್ಲಿ ಅಪಾರ ಖುಷಿಯ ಅನುಭವ ಮಾಡುತ್ತಿದ್ದರು.

★ ಬಾಬಾರವರು ಹೇಳುತ್ತಿದ್ದರು ಮಧುರ ಮಕ್ಕಳೇ ನಿಮಗೆ ತಲೆಯಿಂದ ಕಾಲಿನವರೆಗೂ ಅಪಾರ ಖುಷಿ ಇರಬೇಕಿದೆ ಏಕೆಂದರೆ ಸ್ವಯಂ ತ್ರಿಕಾಲದರ್ಶಿ, ತ್ರಿಲೋಕಿನಾಥ, ಸರ್ವಶಕ್ತಿಮಾನ್ ಶಿವಬಾಬಾ ನಿಮಗೆ ಸಿಕ್ಕಿದ್ದಾರೆ ಹಾಗೂ ಅವರು ನಿಮ್ಮನ್ನು 2500 ವರ್ಷಕ್ಕೋಸ್ಕರವಾಗಿ ಸ್ವರ್ಗದ ರಾಜ್ಯ ಭಾಗ್ಯಕ್ಕೆ ಅಧಿಕಾರಿಗಳನ್ನಾಗಿ ಮಾಡುತ್ತಿದ್ದಾರೆ.